ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

2012ನೇ ಸಾಲಿನ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು)

4. ಮಣಿಪಾಲ ವಿಶ್ವವಿದ್ಯಾಲಯ ವಿಧೇಯಕ, 2012

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಮಣಿಪಾಲ ವಿಶ್ವವಿದ್ಯಾಲಯ ವಿಧೇಯ ಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು. ವಿವರಣೆ ನೀಡಿ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಪಡೆಯುತ್ತಿರತಕ್ಕಂಥ ಸಂಖ್ಯೆ ಮತ್ತು ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸಬೇಕು ಎನ್ನತಕ್ಕಂಥದ್ದು ರಾಜ್ಯ ಮತ್ತು ಕೇಂದ್ರದ ಅಭಿಪ್ರಾಯ. ಪ್ರಸ್ತುತ ಚಾಲ್ತಿಯಲ್ಲಿರತಕ್ಕಂಥ gross enrolment ratio ಅಂದರೆ 18 ರಿಂದ 23 ವಯೋಮಿತಿಯೊಳಗಿನವರ ಉನ್ನತ ಶಿಕ್ಷಣ

ಪಡೆಯುತ್ತಿರತಕ್ಕಂಥ ಪ್ರವೇಶ ಅನುಪಾತ ಇವತ್ತು ರಾಜ್ಯದಲ್ಲಿ 18% ಇದೆ. ದೇಶದಲ್ಲಿ 12% ಇದೆ. ಅದನ್ನು 2020ರ ವೇಳೆಗೆ ಶೇಕಡ 30 ರಷ್ಟಕ್ಕೆ ತೆಗೆದುಕೊಂಡು ಬರಬೇಕೆನ್ನುವುದು ನಮ್ಮ ರಾಜ್ಯ ಸರ್ಕಾರದ ಗುರಿ. ಇದೇ ರೀತಿಯಾಗಿ ಇವತ್ತು global scenario ನೋಡಿದರೆ ಇಡೀ ಜಾಗತಿಕ scenario ನೋಡಿದರೆ ಜಪಾನ್ ದೇಶದಲ್ಲಿ ಉನ್ನತ ಶಿಕ್ಷಣ ಪಡೆದಿರುವವರ ಸಂಖ್ಯೆ 87% ಇದೆ. USA ನಲ್ಲಿ ಅದು 75% ಇದೆ. ದೇಶದಲ್ಲಿ ಕನಿಷ್ಠ 1500 ಯೂನಿವರ್ಸಿಟಿಗಳಾಗಬೇಕು. ಅದರಲ್ಲಿ 50 ನ್ಯಾಷನಲ್ ಯೂನಿವರ್ಸಿಟಿಗಳು ಇರಬೇಕು ಎಂದು ನಮ್ಮ ದೇಶದ National Knowledge Commission recommend ಮಾಡಿದೆ. ಭವಿಷ್ಯದಲ್ಲಿ knowledge-based economy ಇರುವುದು, ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ಬರುತ್ತದೆ, ಹೀಗಾಗಿ ನಮ್ಮ ದೇಶದ ಯುವಕರ ಜ್ಞಾನ ಮಟ್ಟವನ್ನು ಹೆಚ್ಚಿಸಬೇಕು, ಅದಕ್ಕಾಗಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಡಬೇಕೆಂದು Knowledge Commission recommend ಮಾಡಿದೆ. ಆ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ವಿಷನ್ 2020ನಲ್ಲಿಯೂ ಕೂಡ ನಮ್ಮ ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕೊಡಬೇಕೆನ್ನುವ ಯೋಚನೆ ಮಾಡಿದೆ. ಅದರಂತೆ ಈಗಾಗಲೇ ಎರಡು ಖಾಸಗಿ ವಿಶ್ವವಿದ್ಯಾಲಯಗಳು ಇವೆ. 1) ಅಜೀಂ ಪ್ರೇಮ್‌ಜಿಯವರ ವಿಶ್ವವಿದ್ಯಾಲಯ (2) ಅಲಯನ್ಸ್ ವಿಶ್ವ ವಿದ್ಯಾಲಯ, ಎರಡು ಖಾಸಗಿ ವಿಶ್ವವಿದ್ಯಾಲಯಗಳು ಬಂದಿವೆ. ಈಗ ಮಣಿಪಾಲ ಖಾಸಗಿ ವಿಶ್ವವಿದ್ಯಾಲಯಕ್ಕೆ ನಾವು ಅನುಮತಿ ಕೊಡಲಿಕ್ಕೆ ನಮ್ಮ ಹತ್ತಿರ ಅವರ ಅರ್ಜಿ ಬಂದಿದೆ. ಅವರು ಈಗಾಗಲೇ ದೇಶದ ನಾಲ್ಕು ಕಡೆಗಳಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ನಡೆಸುತ್ತಿದ್ದಾರೆ. ಒಳ್ಳೆಯ ಹೆಸರು ಪಡೆದಿರುವಂಥ ಶಿಕ್ಷಣ ಸಂಸ್ಥೆ. ಆ ಹಿನ್ನೆಲೆಯಲ್ಲಿ ಈ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಡುವುದಕ್ಕೆ ಅವರಿಗೆ ಎಲ್ಲಾ ರೀತಿಯ ಒಂದು ಖಾಸಗಿ ವಿಶ್ವ ವಿದ್ಯಾಲಯ ಮಾಡತಕ್ಕಂಥ ಎಲ್ಲಾ ಅನುಕೂಲತೆಗಳನ್ನು ಕೂಡ ಆ ಸಂಸ್ಥೆ ಹೊಂದಿರುವುದರಿಂದ ಇದೊಂದು ಅನಿವಾರ್ಯತೆ ಇದೆ.

ಏಕೆಂದರೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವಂಥ Harvard University ಇರಬಹುದು, Oxford University ಇರಬಹುದು, ಇವೆಲ್ಲವೂ ಕೂಡ ಖಾಸಗಿ ವಿಶ್ವವಿದ್ಯಾಲಯಗಳೆ. ಜಾಗತಿಕ ಮಟ್ಟದ ಟಾಪ್ 10 ವಿಶ್ವವಿದ್ಯಾಲಯಗಳಲ್ಲಿ ಅಷ್ಟೂ ಖಾಸಗಿ ವಿಶ್ವ ವಿದ್ಯಾಲಯಗಳು ಬರುತ್ತವೆ. ಉತ್ಕೃಷ್ಟ ಜ್ಞಾನವನ್ನು ಕೊಡತಕ್ಕಂಥ ವಿಶ್ವವಿದ್ಯಾಲಯಗಳಲ್ಲಿ ಖಾಸಗಿ ವಿಶ್ವವಿದ್ಯಾಲಯಗಳೇ ಬರುತ್ತವೆ. ಆ ಹಿನ್ನೆಲೆಯಲ್ಲಿ ನಾವು ಖಾಸಗಿ ವಿಶ್ವವಿದ್ಯಾಲಯಗಳನ್ನು ಕೊಡಬೇಕು. ನಾವು ಕೆಲವು ತಿದ್ದುಪಡಿಗಳನ್ನು ಮಾಡಿದ್ದೇವೆ. ಹಿಂದೆ ಖಾಸಗಿ ವಿಶ್ವವಿದ್ಯಾಲಯ ಕೊಟ್ಟಾಗ ನಮ್ಮ ರಾಜ್ಯದ ಕೋಟಾವನ್ನು 25% ಗೆ ಅವಕಾಶ ಮಾಡಿದ್ದರು. ಅದನ್ನು ನಾವು 40%ಗೆ ಏರಿಸಿದ್ದೇವೆ. ರಾಜ್ಯದ ಕೋಟಾವನ್ನು 40%ಗೆ ಏರಿಸಿದ್ದೇವೆ. ಮುಂಚೆ compact land ಇಷ್ಟೇ ಇರಬೇಕೆನ್ನುವ ನಿಬಂಧನೆ ಇರಲಿಲ್ಲ. ಬೆಂಗಳೂರು ಸಿಟಿಯಲ್ಲಾದರೆ 25 ಎಕರೆ compact land ಇರಬೇಕು, BBMP ವ್ಯಾಪ್ತಿಯ ಹೊರಗಡೆಯಾದರೆ 40 ಎಕರೆ compact land ಇರಬೇಕು, ಅದರಾಚೆಗಾದರೆ ಅಂದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಆದರೆ 50 ರಿಂದ 60 ಎಕರೆ compact land ಇರಬೇಕು ಎಂದು ತಿದ್ದುಪಡಿ ತಂದಿದ್ದೇವೆ. ಬೆಂಗಳೂರು ಸಿಟಿಯಲ್ಲಾದರೆ ದತ್ತಿ ನಿಧಿ ಕನಿಷ್ಠ 10 ಕೋಟಿ ಕ್ಯಾಷ್, 15 ಕೋಟಿ ಬ್ಯಾಂಕ್ ಗ್ಯಾರಂಟಿ ದತ್ತಿ ನಿಧಿ ಒಟ್ಟು 25 ಕೋಟಿ ಇಡಬೇಕೆಂದು ಮಾಡಿದ್ದೇವೆ. ಹೊರಗಡೆ ಜಿಲ್ಲೆಗಳಲ್ಲಾದರೆ, ಹಿಂದುಳಿದ ಜಿಲ್ಲೆಗಳಲ್ಲಾದರೆ, 10 ಕೋಟಿ ಕ್ಯಾಷ್ ಮತ್ತು 5 ಕೋಟಿ ಬ್ಯಾಂಕ್ ಗ್ಯಾರಂಟಿ ದತ್ತಿ ನಿಧಿ ಇಡಬೇಕು ಎನ್ನುವ ಯೋಚನೆಯನ್ನು ಮಾಡಿದ್ದೇವೆ. ಇದಲ್ಲದೆ ಮುಂಚೆ fee fixation ಗೆ management ಗೆ committee ಮಾಡಿಕೊಳ್ಳುವುದಕ್ಕೆ ಅವಕಾಶವಿತ್ತು. ಆದರೆ, ಈಗ ಸರ್ಕಾರ ಸಮಿತಿ ಮಾಡಬೇಕು. ಆ ಸಮಿತಿಯಲ್ಲಿ High court or Supreme court ನ ರಿಟೈರ್ಡ್ ಜಡ್ಜ್ ಆ ಸಮಿತಿಯ ಅಧ್ಯಕ್ಷನಾಗಿರತಕ್ಕಂಥದ್ದು ಮತ್ತು ಸಮಿತಿ ವಾಸ್ತವಿಕ ವೆಚ್ಚವನ್ನಾಧರಿಸಿ, ರಾಜ್ಯದ 40% ಸೀಟಿನ ಕೋಟಾಕ್ಕೆ fee fixation ಮಾಡಬೇಕೆನ್ನುವ ಒಂದು recommendation ಅನ್ನು ಈ ಒಂದು

ತಿದ್ದುಪಡಿಯಲ್ಲಿ ಸೇರಿಸಿದ್ದೇವೆ. ಇದಲ್ಲದೆ ಮುಂಚೆ malpractice ಮಾಡಿದರೆ ಏನಾದರೂ ತಪ್ಪು ಮಾಡಿದರೆ, ಅದು ಮಾರ್ಕ್ಸ್ ಕಾರ್ಡು ಇತ್ಯಾದಿ ಡೂಪ್ಲಿಕೇಟ್ ಮಾಡಿದರೆ ಶಿಕ್ಷೆ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಈಗ 50 ಸಾವಿರ ರೂಪಾಯಿಗಳಿಂದ 10 ಲಕ್ಷ ರೂಪಾಯಿವರೆಗೆ ದಂಡ, ತಪ್ಪಿತಸ್ಥರೆಂದು ಸಾಬೀತಾದವರಿಗೆ 6 ತಿಂಗಳಿನಿಂದ 2 ವರ್ಷದವರೆಗೆ ಸಜೆ ವಿಧಿಸತಕ್ಕಂಥ ಅವಕಾಶವನ್ನು ಕೂಡ ಈ ಒಂದು ಖಾಸಗಿ ವಿಶ್ವ ವಿದ್ಯಾಲಯ ಮಸೂದೆಯಲ್ಲಿ ತಂದಿದ್ದೇವೆ. ಹಾಗಾಗಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಇದೊಂದು ತಿದ್ದುಪಡಿಯೊಂದಿಗೆ, ಇದರಲ್ಲಿ ಒಂದು ತಿದ್ದುಪಡಿಯಾಗಬೇಕಾಗಿರುವುದು, ನಾವು management ಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಿಂದ ಪ್ರತಿನಿಧಿ ಎಂದು ಹೇಳಿದ್ದೆವು. ಅದಕ್ಕೆ ತುಂಬಾ ವ್ಯಾಪಕವಾಗಿ ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿದಾಗ ಮತ್ತು ಆಡಳಿತ ಪಕ್ಷದ ಸದಸ್ಯರ ಜೊತೆಗೆ ಚರ್ಚೆ ಮಾಡಬೇಕಾದರೆ, ಖಾಸಗಿ management ನೊಳಗಡೆ ಇಡೀ ದೇಶದಲ್ಲಿ ಎಲ್ಲಿಯೂ ಶಾಸನ ಸಭೆಯ ಸದಸ್ಯರುಗಳನ್ನು ಸೇರಿಸಿಲ್ಲ, ಅದು ಸರಿಯಾಗುವುದಿಲ್ಲವೆನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಹಾಗಾಗಿ ಅದನ್ನು ವಾಪಸ್ ತೆಗೆದುಕೊಳ್ಳುವುದಲ್ಲದೆ ಪಿಹೆಚ್‌ಡಿ ಮಾಡುವ ಸಂಶೋಧನಾ ವಿದ್ಯಾರ್ಥಿಗಳಿಗೆ ನಾವು 40% ಎಂದು ಹೇಳಿದ್ದೆವು. ಅವರು ಹೇಳಿದರು ಪಿಹೆಚ್‌ಡಿ ಮಾಡುವವರಿಗೆ ಒಂದೊಂದು ಸೀಟುಗಳಿರುತ್ತವೆ. ಹೀಗಾಗಿ 40% ಎಂದು ನಿಗಧಿ ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ ಪಿಹೆಚ್‌ಡಿಗೆ ಸಂಶೋಧನೆಗೆ ಮಾತ್ರ 40% ಕೋಟಾ ಇಲ್ಲ, PG, UG, ಇವೆಲ್ಲಕ್ಕೂ ಕೂಡ ಶೇಕಡ 40% ರಾಜ್ಯದ ಕೋಟಾ ಇರಬೇಕು. ಈಗಾಗಲೇ ನಮ್ಮ ದೇಶದಲ್ಲಿ ಅತಿ ಹೆಚ್ಚಿನ ಖಾಸಗಿ ವಿಶ್ವ ವಿದ್ಯಾಲಯಗಳು ರಾಜಸ್ತಾನದಲ್ಲಿವೆ, ಹಿಮಾಚಲ ಪ್ರದೇಶಗಳಲ್ಲಿವೆ, ಇಡೀ ದೇಶದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಬೇರೆ ಬೇರೆ ಕಡೆಯಲ್ಲಿ ಪ್ರಾರಂಭವಾಗಿವೆ. ನಾವು ಒಂದಷ್ಟು ನಿಬಂಧನೆಗಳೊಂದಿಗೆ ಸಾಮಾಜಿಕ ನ್ಯಾಯವನ್ನು ಪಾಲಿಸಿ ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಖಾಸಗಿ ವಿಶ್ವವಿದ್ಯಾಲಯ

ಮಸೂದೆಯನ್ನು ಮಂಡಿಸುತ್ತಿದ್ದೇವೆ, ಹೀಗಾಗಿ ಈ ಮಣಿಪಾಲ ವಿಶ್ವ ವಿದ್ಯಾಲಯ ಒಪ್ಪಿಕೊಳ್ಳಬೇಕೆನ್ನುವ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ (ತುಮಕೂರು ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇನು ಮಣಿಪಾಲ ವಿಶ್ವ ವಿದ್ಯಾಲಯ ವಿಧೇಯಕ ವನ್ನೇನು ಮಂಡಿಸುತ್ತಿದ್ದಾರೆ, ಇದು ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ವಿಶ್ವವಿದ್ಯಾಲಯಗಳನ್ನು ನಾವು–ಮಾಡಿದ್ದೇವೆ. ಜೊತೆಗೆ ಖಾಸಗಿ ವಿಶ್ವವಿದ್ಯಾಲಯಗಳಾದ ಕ್ರೈಸ್ಟ್ ವಿಶ್ವವಿದ್ಯಾಲಯ, ಅಲಯನ್ಸ್ ಬ್ಯುಸಿನೆಸ್ ಅಕಾಡೆಮಿ ವಿಶ್ವವಿದ್ಯಾಲಯ ಜೊತೆಗೆ ಮತ್ತೊಂದು ವಿಶ್ವವಿದ್ಯಾಲಯಗಳಿಗೆ ಕಳೆದ ಅಸೆಂಬ್ಲಿಯಲ್ಲಿ ಪಾಸ್ ಮಾಡಿ ಕೊಟ್ಟಿತ್ತು. ಒಂದು ಸಲ ವಿಶ್ವವಿದ್ಯಾಲ ಯವನ್ನು ಖಾಸಗಿಯಾಗಿ ಮಾಡಿ ಅವರಿಗೆ ಮಾನ್ಯತೆ ಕೊಟ್ಟರೆ ಯಾವುದೇ ಕಾರಣಕ್ಕೆ ಅಲ್ಲಿ ಎಸ್‌ಸಿ/ಎಸ್‌ಟಿ ಗಳಿಗಾಗಲಿ, ಒಬಿಸಿ ಗಳಿಗಾಗಲಿ ಯಾವುದೇ ಒಂದು ಸಂದರ್ಭದಲ್ಲಿ ನಾವು ಅಡ್ಮಿಷನ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ಇವರು ಅಲ್ಲಿ High court or Supreme court ನ ರಿಟೈರ್ಡ್ ಜಡ್ಜ್‌ನ್ನು ಆ ಸಮಿತಿಯ ಅಧ್ಯಕ್ಷನಾಗಿ ಮಾಡುತ್ತೇವೆಂದು ಹೇಳಿದರು. ಈಗಾಗಲೇ ಎರಡು ವಿಶ್ವವಿದ್ಯಾಲಯಗಳನ್ನು ಮಾಡಿದ್ದರಲ್ಲಾ ಕ್ರೈಸ್ಟ್ ವಿಶ್ವವಿದ್ಯಾಲಯ ಇರಬಹುದು, ಅಲಯನ್ಸ್ ಬ್ಯುಸಿನೆಸ್ ಅಕಾಡೆಮಿ ವಿಶ್ವವಿದ್ಯಾಲಯ ಇರಬಹುದು. ಆಮೇಲೆ ಮೊತ್ತೊಬ್ಬರ ಹೆಸರನ್ನು ಅವರು ಪ್ರಸ್ತಾಪಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ. ಈ ಮೂರು ವಿಶ್ವವಿದ್ಯಾಲಯಗಳಲ್ಲಿ 4 ವರ್ಷಗಳ ಹಿಂದೆ ಆಗಿರುವಂಥ ಸಂದರ್ಭದಲ್ಲಿ ಎಷ್ಟು ಜನ ಎಸ್‌ಸಿ/ಎಸ್‌ಟಿ ಯವರು ಅಡ್ಮಿಷನ್ ಆಗಿದ್ದಾರೆ? ಅಲ್ಲಿ ಏನು Fee structure ಇದೆ? ಇವೆಲ್ಲವನ್ನೂ ಉಲ್ಲೇಖಿನ ಮಾಡಬೇಕು. ಅವುಗಳನ್ನು ಮೊದಲು review ಮಾಡಬೇಕು. ಈಗಾಗಲೇ ಕೊಟ್ಟಿರತಕ್ಕಂಥ ವಿಶ್ವವಿದ್ಯಾಲಯಗಳು ಮಕ್ಕಳಿಗೆ ಎಲ್ಲಾ ಸಾಮಾಜಿಕ ಬದ್ಧತೆಯನ್ನು ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ರಿವ್ಯೂ ಮಾಡಬೇಕು. Higher Education values ಅಮೇರಿಕಾ ರಾಷ್ಟ್ರದಲ್ಲಿ 75%, ಜಪಾನ್ ದೇಶದಲ್ಲಿ 85% ಇದೆ ಎಂದು ಹೇಳಿದರು.

ಆದರೆ, ಜಪಾನ್ ದೇಶಗಳಲ್ಲಿ ಬಹಳ ಕಡಿಮೆ ಇದೆ. ಹಾಗೆಯೇ ಅಮೇರಿಕಾ ರಾಷ್ಟ್ರದಲ್ಲಿ 20 ಕೋಟಿ ಜನಸಂಖ್ಯೆ ಇದ್ದಾರೆ. ನಮ್ಮ ದೇಶದಲ್ಲಿ 120 ಕೋಟಿ ಜನ ಸಂಖ್ಯೆ ಇದ್ದಾರೆ. ಆದ್ದರಿಂದ, ಮಾನ್ಯ ಸಚಿವರಾಗಿರುವ ರವಿಯವರು ತಂದಿರುವ ಈ ಬಿಲ್ ಸಾಮಾಜಿಕ ಬದ್ಧತೆಯನ್ನು ಹಾಳು ಮಾಡುವಂಥ ಒಂದು ವ್ಯವಸ್ಥೆಯಾಗಿದೆ. ಮಣಿಪಾಲ್ ವಿಶ್ವವಿದ್ಯಾಲಯದಲ್ಲಿ ಇವತ್ತಿನ ದಿವಸ ಎಸ್‌ಸಿ:ಎಸ್‌ಟಿ ಮಕ್ಕಳು ಓದುವುದಕ್ಕೆ ಸಾಧ್ಯವಿದೆಯೇ? ಸರ್ಕಾರದ ಹಿಡಿತದಲ್ಲಿ ವಿಶ್ವವಿದ್ಯಾಲಯಗಳು ಇದ್ದಾಗ ಚೆನ್ನಾಗಿ ನಡೆಯುತ್ತವೆ. ಇದಕ್ಕೆ ಬೇಕಾಗಿರುವ ಸಾಕಷ್ಟು ಆಕ್ಟ್‌ಗಳನ್ನು ನಾವು ಇಲ್ಲಿ ಪಾಸ್ ಮಾಡಿ ಕಳುಹಿಸುತ್ತೇವೆ. Act ಮತ್ತು statute ಪ್ರಕಾರ Vice Chancellor, Registrar, Registrar (Evaluation) ಅಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಇದರಲ್ಲಿ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಇರಬಾರದೆಂದು ಮತ್ತೊಂದು ತಿದ್ದುಪಡಿಯನ್ನು ತಂದಿದ್ದಾರೆ. ಮ್ಯಾನೇಜ್ ಮೆಂಟ್‌ನ ಒತ್ತಡಕ್ಕೆ ಒಳಗಾಗಿ ಮಾನ್ಯ ರವಿಯವರು ಈ ತಿದ್ದುಪಡಿಯನ್ನು ತಂದಿದ್ದಾರೆ. ಜನಪ್ರತಿನಿಧಿಗಳು ವಿಶ್ವವಿದ್ಯಾಲಯಗಳಲ್ಲಿದ್ದಾಗ ನಾವು ಸರಿಯಾಗಿ ಕೆಲಸ ಮಾಡದೆ ಇದ್ದರೆ ತೊಂದರೆ ಆಗುತ್ತದೆಂಬ ಒಂದು ಆತಂಕ ಅವರಿಗೆ ಇರುತ್ತದೆ. ಎಸ್‌ಸಿ:ಎಸ್‌ಟಿ ಮೀಸಲಾತಿ ಮತ್ತು fee structure ಅನ್ನು ಸರಿಯಾದ ರೀತಿಯಲ್ಲಿ ನಾವು ಮಾಡದೆ ಇದ್ದರೆ ಅಸೆಂಬ್ಲಿಯಲ್ಲಿ ಪ್ರಶ್ನೆ ಮಾಡಿ ಅದನ್ನು ವಾಪಸ್ಸು ತೆಗೆಯುತ್ತಾರೆಂಬ ಆತಂಕ ಇರುತ್ತದೆ. ಇವತ್ತಿನ ದಿವಸ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ನಮ್ಮ ಮಕ್ಕಳನ್ನು ಅಡ್ಮಿಷನ್ ಮಾಡುವುದಕ್ಕೆ ಇರುವ ಸಮಸ್ಯೆಯನ್ನು ನಾವೆಲ್ಲ ನೋಡುತ್ತೇವೆ. ಅಂದರೆ, ನಮ್ಮ ಮಕ್ಕಳಿಗೆ ಮೆಡಿಕಲ್ ಅಥವಾ ಇಂಜಿನಿಯರ್ ಕೋರ್ಸ್‌ಗೆ ಅಡ್ಮಿಷನ್ ಮಾಡಿಕೊಳ್ಳ ಬೇಕಾದರೆ ಎಷ್ಟೆಷ್ಟು ಹೆಚ್ಚಿಗೆ ಹಣವನ್ನು ವಸೂಲಿ ಮಾಡುತ್ತಾರೆಂದು ಮತ್ತು ಯಾವ ರೀತಿಯಾಗಿ ಛೀಟನ್ ಮಾಡುತ್ತಾರೆಂಬುದನ್ನು ಹಾಗೆಯೇ ಎಷ್ಟೋ ಮಕ್ಕಳು ಅಡ್ಮಿಷನ್ ಆಗದೆ ವಾಪಸ್ಸು ಬಂದು ಸರ್ಕಾರದ ಮುಂದೆ ಮನವಿ ಗಳನ್ನು ಕೊಡುವುದನ್ನು ನಾವೆಲ್ಲ ನೋಡುತ್ತೇವೆ. ಆದ್ದರಿಂದ, ಖಾಸಗಿ

ವಿಶ್ವವಿದ್ಯಾಲಯಗಳಿಗೆ ಅವಕಾಶ ಕೊಡುವುದರಿಂದ liberalization ಆಗುತ್ತದೆ. Foreign Direct Investment ಬಿಲ್ ಅನ್ನು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಮಂಡಿಸಿ ಎಲ್ಲರೂ ಮುಕ್ತವಾಗಿ ವ್ಯಾಪಾರ ಮಾಡಬಹು ದೆಂದು ಆಗಿದೆಯೋ ಅದೇ ರೀತಿಯಲ್ಲಿ ಈ ಬಿಲ್ ಸಹ ಇದೆ. ಆದ್ದರಿಂದ, ಶಾಸಕರು ಇರುಬಾರದೆಂದು ಏನು ತಿದ್ದುಪಡಿ ತರಲಾಗಿದೆಯೋ ಅದನ್ನು ತೆಗೆಯಬೇಕು. ಏಕೆಂದರೆ, ಅಲ್ಲಿ ವಿಧಾನಸಭೆ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಇರಬೇಕು. ಆದ್ದರಿಂದ ಆ ತಿದ್ದುಪಡಿಯನ್ನು ಖಂಡಿತ ವಾಪಸ್ಸು ತೆಗೆದುಕೊಳ್ಳಬೇಕು. ಇದಕ್ಕೆ ಮತ್ತೆ ತಿದ್ದುಪಡಿ ಮಾಡಿ ಈ ಬಿಲ್ ಅನ್ನು ತರಬೇಕೆಂದು ಹೇಳುತ್ತೇನೆ. ಹಾಗೆಯೇ ಮೂರು ವರ್ಷಗಳ ಹಿಂದೆ ಅನುಮತಿ ಕೊಟ್ಟಂಥ ವಿಶ್ವವಿದ್ಯಾಲಯಗಳ ಆಗುಹೋಗುಗಳ ಬಗ್ಗೆ ರಿವ್ಯೂ ಮಾಡಬೇಕಾಗುತ್ತೆ. ಅಂದರೆ, ಯಾವ ರೀಯಾಗಿ fee structure ಇದೆ ಎಂಬುದರ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ ರಿವ್ಯೂ ಮಾಡುತ್ತಿಲ್ಲ. ಇಲ್ಲಿ ಅಪ್ರೂವಲ್ ಮಾಡಿಕೊಟ್ಟರೆ ಹೈಕೋರ್ಟಿನ ಯಾವ ನಿವೃತ್ತ ಜಡ್ಜ್ ಕೂಡ ಅಲ್ಲಿಗೆ ಬರುವುದಿಲ್ಲ. ಮತ್ತೆ ಅಲ್ಲಿ ಯಾರೊಬ್ಬರ ಒಂದು ಸಮಿತಿಯನ್ನು ಸಹ ಮಾಡುವುದಿಲ್ಲ. ಅವರಿಗೆ ಬೇಕಾದ ರೀತಿಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ದರ್ಬಾರ್ ನಡೆಸುತ್ತಾರೆ. ಆದ್ದರಿಂದ, ಇದು ಆಗಬಾರ ದೆಂದು ಹೇಳುವುದಕ್ಕೆ ಬಯಸುತ್ತೇನೆ. ವಿಶ್ವವಿದ್ಯಾಲಯಗಳು ಯಾವತ್ತು ಕೂಡ ಸರ್ಕಾರದ ಕಂಟ್ರೋಲ್‌ನಲ್ಲಿರಬೇಕು. ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಆಕ್ಟ್ ಕೂಡ ಇದೆ. ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯವನ್ನು 3 ಭಾಗಗ ಳನ್ನಾಗಿ ಮಾಡಿದ್ದಾರೆ. ಮೂರು ಭಾಗವಾಗಿ ವಿಂಗಡನೆ ಮಾಡಿದಾಗ ಪ್ರತಿ ವರ್ಷ ವಿಶ್ವವಿದ್ಯಾಲಯ LIC report ಅನ್ನು ಕಳುಹಿಸುತ್ತಾರೆ. ಆಂದರೆ, Local Inspection Committee ಅಲ್ಲಿಗೆ ಹೋಗಿ ರೋಸ್ಟರ್ ಸಿಸ್ಟಮ್ ಅನ್ನು ಮತ್ತು ಎಸ್‌ಸಿ:ಎಸ್‌ಟಿ ಮತ್ತು ಒಬಿಸಿ ಜನಗಳಿಗೆ ನೇಮಕಾತಿ ಮಾಡಿದ್ದಾರೆಯೇ ಎಂದು ಹಾಗೂ ಇದಕ್ಕೆ ಸಂಬಂಧಪಟ್ಟ ಎಲ್ಲಾ ಸ್ಟ್ರಕ್ಚರ್ ಗಳನ್ನು ನೋಡಿ ಅವರಿಗೆ ಮಾನ್ಯತೆಯನ್ನು ಕೊಡುತ್ತಾರೆ. ಈ ರೀತಿಯಾಗಿ

ನೋಡಿ ಒಂದು ಸಲ ಮಾನ್ಯತೆ ಕೊಟ್ಟರೆ ಮತ್ತೆ 5 ವರ್ಷಕ್ಕೆ ರಿವ್ಯೂ ಮಾಡುತ್ತಾರೆ. Whole structure ಅನ್ನು ಹಾಳು ಮಾಡುವಂತಹ ಒಂದು ವ್ಯವಸ್ಥೆ ಈ ಒಂದು education system ನಲ್ಲಿದೆ. ಆದ್ದರಿಂದ, ಮಾನ್ಯ ಸಚಿವರಾಗಿರುವ ರವಿಯವರು ಈ ಬಿಲ್ ಅನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಈ ಹೌಸ್‌ನಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಹಿಂದೆ ಅನುಮತಿ ಕೊಟ್ಟಂತಹ ವಿಶ್ವವಿದ್ಯಾಲಯಕ್ಕೆ 25% ಕೋಟಾವನ್ನು ನಿಗದಿ ಮಾಡಲಾಗಿತ್ತು. ರಾಜ್ಯದ 25% ಕೋಟಾವನ್ನು ಅವರು ತುಂಬಿದ್ದಾರೆ. ನಮ್ಮ ರಾಜ್ಯದ ಅರ್ಜಿಗಳು ಬಾರದೆ ಇದ್ದಾಗ ಮಾತ್ರ ಅವರು ಬೇರೆಯವರಿಗೆ ಕೊಡುವುದಕ್ಕೆ ಅವಕಾಶ ಇದೆ.

ಶ್ರೀ ಬಿ. ಸುರೇಶ್ ಗೌಡ :– ಮಾನ್ಯ ಸಚಿವರೆ, ಅವರು ಕೇಳುವಷ್ಟು fee ಯನ್ನು ಕೊಟ್ಟು ಯಾರು ಹೋಗುತ್ತಾರೆ? ವಿಶ್ವವಿದ್ಯಾಲಯದ ಬಗ್ಗೆ ನನಗೂ ಸಹ ಗೊತ್ತಿದೆ. ನಾನು ಸುಮಾರು 10 ವರ್ಷಗಳ ಕಾಲ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ಏನಿದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮೊದಲು 25% ಇತ್ತು ಈಗ 40% ಮಾಡಿದ್ದೇವೆ. Fee fixation ಮಾಡುವುದಕ್ಕೆ ಮ್ಯಾನೇಜ್‌ಮೆಂಟ್ ಅಥಾರಿಟಿ ಇತ್ತು ಈಗ ಅದನ್ನು ಸ್ಟೇಟ್‌ಗೆ ತೆಗೆದುಕೊಂಡಿದ್ದೇವೆ. ರಾಜ್ಯ ಸೂಚಿಸುವಂತಹ ನಿವೃತ್ತ ಜಡ್ಜ್ ಅಧ್ಯಕ್ಷರಾಗಿರುವಂಥ ಸಮಿತಿಯನ್ನು ಮಾಡಲಾಗಿದೆ. ಮ್ಯಾನೇಜ್‌ಮೆಂಟ್‌ನ ಪ್ರಬಂಧಕ ಮಂಡಳಿಯು ನಾಮ ನಿರ್ದೇಶನ ಮಾಡತಕ್ಕಂಥ ಮೂರು ಜನ ಖ್ಯಾತ ಶಿಕ್ಷಣ ತಜ್ಞರು ಆ ಸಮಿತಿಯಲ್ಲಿ ಇರುತ್ತಾರೆ. ಇದರಲ್ಲಿ ಕಡ್ಡಾಯವಾಗಿ ಒಬ್ಬ ಮಹಿಳಾ ಸದಸ್ಯರು ಇರಬೇಕಾಗಿತ್ತು. ಆದರೆ, ಇದರಲ್ಲಿ ಬಿಟ್ಟು ಹೋಗಿದೆ. ಅಂದರೆ, ಕಲಂ 38ರಲ್ಲಿ ಶುಲ್ಕ ನಿಯಂತ್ರಣ ಸಮಿತಿ ಎಂದು ಇರುವ ಕಡೆ ಟೈಪಿಂಗ್ ಮಿಸ್ಟೇಕ್‌ನಲ್ಲಿ ಬಿಟ್ಟುಹೋಗಿದೆ. ಆದರೆ, ನಾವು ಕೊಟ್ಟಿರುವುದೊಳಗೆ ಇದೆ. ಪ್ರಬಂಧಕ

ಮಂಡಳಿ ನಾಮ ನಿರ್ದೇಶನ ಮಾಡತಕ್ಕಂಥ ಮೂವರು ಖ್ಯಾತ ಶಿಕ್ಷಣ ತಜ್ಞರು ಇದರಲ್ಲಿ ಒಬ್ಬರು ಕಡ್ಡಾಯವಾಗಿ ಮಹಿಳಾ ಸದಸ್ಯರು ಇರಬೇಕು. ಈ ಸದರಿ ಅಂಶವನ್ನು ಆ ಮಸೂದೆಯಲ್ಲಿ ಸೇರಿಸಿಕೊಳ್ಳಬೇಕು. ಹಿಂದೆ ಕೊಟ್ಟಿರುವಂತಹ ವಿಶ್ವವಿದ್ಯಾಲಯಗಳು 25% ಕೊಟ್ಟಿದ್ದಾರೆ. ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳನ್ನು ನೋಡುವುದಕ್ಕೆ ಬೇಕಾಗಿರುವ ಒಂದು regulatory authority ಯನ್ನು ಮಾಡುವಂಥ ಒಂದು ಚಿಂತನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈಗಾಗಲೇ ರಾಜಸ್ಥಾನದಲ್ಲಿ 33 ಮತ್ತು ಉತ್ತರ ಪ್ರದೇಶದಲ್ಲಿ 17 ಖಾಸಗಿ ವಿಶ್ವವಿದ್ಯಾಲಯಗಳು ಇವೆ. ದೇಶದಲ್ಲಿ ಒಟ್ಟು 138 ಖಾಸಗಿ ವಿಶ್ವವಿದ್ಯಾಲಯಗಳು ಇವೆ. ಹಾಗೆಯೇ ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಖಾಸಗಿ ವಿಶ್ವವಿದ್ಯಾಲಯಕ್ಕೆ ಅನುಮತಿಯನ್ನು ಕೊಟ್ಟಿವೆ. ನಮ್ಮ ರಾಜ್ಯದಲ್ಲಿ highest ಆಗಿ ಖಾಸಗಿಯವರ ಪಾತ್ರ ಜಾಸ್ತಿ ಇದೆ. ಅಂದರೆ, 195 ಇಂಜಿನಿಯರಿಂಗ್ ಕಾಲೇಜ್‌ನಲ್ಲಿ 181 ಖಾಸಗಿ ಇಂಜಿನಿಯರಿಂಗ್ ಕಾಲೇಜು ಗಳಿವೆ. ಕೇವಲ 14 ಮಾತ್ರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿವೆ. ಖಾಸಗಿ ಎಂದ ತಕ್ಷಣ ಎಲ್ಲವನ್ನೂ ಒಂದೇ ದೃಷ್ಟಿಯಲ್ಲಿ ನೋಡಬೇಕಾಗಿಲ್ಲ. ಕೆಎಲ್‌ಇ, ಹೆಚ್‌ಕೆ.ಐ., ಜೆಎಸ್‌ಎಸ್, ಆದಿಚುಂಚನಗಿರಿ, ಸಿದ್ಧಗಂಗಾ ಸಂಸ್ಥೆಗಳಿರಬಹುದು. ಇವೆಲ್ಲ ಖಾಸಗಿ ಸಂಸ್ಥೆಗಳಾಗಿ ಶಿಕ್ಷಣ ಕ್ಷೇತ್ರಕ್ಕೆ ಕೊಡುತ್ತಿ ರುವಂಥ ಕೊಡುಗೆ ಕಡಿಮೆ ಮಟ್ಟದ್ದೇನು ಅಲ್ಲ. ಇವತ್ತು ಐಟಿ ಸಿಟಿ ಎಂದು ಬೆಂಗಳೂರನ್ನು ಗುರುತಿಸುವುದಕ್ಕೆ ಕಾರಣ ಇದ್ದರೆ ಖಾಸಗಿ incentive ಎಂದು ಹೇಳಬಹುದು. ಆದ್ದರಿಂದ, ಎಲ್ಲವನ್ನು ಒಂದೇ ದೃಷ್ಟಿಯಲ್ಲಿ ನೋಡುವ ಹಾಗಿಲ್ಲ. ಇವತ್ತಿನ ಅನಿವಾರ್ಯತೆಯಿಂದ ನಿಬಂಧನೆ ಗಳನ್ನು ತಂದು social justice ಅನ್ನು maintain ಮಾಡಿ ರಾಜ್ಯದ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವಂತೆ ಮಾಡಿ ಖಾಸಗಿಯವರಿಗೆ ಅನುಮತಿಯನ್ನು ಕೊಡುವಂಥ ಕೆಲಸವನ್ನು ಮಾಡಿದ್ದೇವೆ. ಇದರಿಂದ ರಾಜ್ಯಕ್ಕೆ ಒಳ್ಳೆಯ ದಾಗುತ್ತದೆ. ಆದ್ದರಿಂದ, ಈ ಬಿಲ್ ಅನ್ನು ಮತಕ್ಕೆ ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸುರೇಶ್ ಗೌಡ :- ಮಾನ್ಯ ಅಧ್ಯಕ್ಷರೆ, ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಗಳನ್ನು ಕಿತ್ತು ಹಾಕಬೇಕೆಂಬ ತಿದ್ದುಪಡಿ ತಂದಿದ್ದಾರೆ. ಇದು ಆಗಬಾರದೆಂದು ಹೇಳುತ್ತಾ ಇದನ್ನೂ ಸಹ ಅದರಲ್ಲಿ ಸೇರಿಕೊಳ್ಳಬೇಕು ಈ ಸಂದರ್ಭದಲ್ಲಿ ಮಾನ್ಯ ರವಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ :- ಮಾನ್ಯ ಅಧ್ಯಕ್ಷರೆ, ಹಿಂದೆ ಇದ್ದಂತಹ ಎರಡು ವಿಶ್ವವಿದ್ಯಾಲಯಗಳಿಗೆ ಮತ್ತು ಬೇರೆ ಬೇರೆ ರಾಜ್ಯದ ಯಾವುದೇ ಖಾಸಗಿ ವಿಶ್ವವಿದ್ಯಾಲಯದಲ್ಲಿ ಎಂಎಲ್ಎ ಮತ್ತು ಎಂಎಲ್ಸಿ ಗಳನ್ನು ಸೇರಿಸಿಲ್ಲ.

(ಗೊಂದಲ)

ಶ್ರೀ ಕೆ. ರಘುಪತಿ ಭಟ್ (ಉಡುಪಿ) :- ಮಾನ್ಯ ಅಧ್ಯಕ್ಷರೆ, ವಿಧಾನ ಸಭೆ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಿದರೆ ಅವರೇನಾದರೂ ತೊಂದರೆ ಮಾಡುತ್ತಾರೆ ಎಂಬ ಭಯ ಏನಾದರೂ ವಿಶ್ವವಿದ್ಯಾಲಯಕ್ಕೆ ಇದೆಯೇ? ಜನರಿಂದ ಆಯ್ಕೆಯಾಗಿ ಬಂದಂಥ ಶಾಸಕರನ್ನು ಸೇರಿಸಿರುವಂಥದ್ದನ್ನು ತಾವೇಕೆ ವಾಪಸ್ಸು ಮಾಡುತ್ತೀರಿ? ಖಂಡಿತಾ ಇದನ್ನು ಮಾಡಬಾರದು. ಮಾನ್ಯ ಸಚಿವರೆ, ನಾನು ಮಾತನಾಡಿದ ನಂತರರ ತಾವು ಒಟ್ಟಿಗೆ ಉತ್ತರ ಹೇಳಿ?

ಶ್ರೀ ಸಿ.ಟಿ. ರವಿ :- ಮಾನ್ಯ ಅಧ್ಯಕ್ಷರೆ, ವೆಬ್ಸೈಟ್‌ನಲ್ಲಿ ಅವರ ಎಲ್ಲಾ ವಿವರಗಳನ್ನು ಸಾರ್ವತ್ರಿಕ ಪಡಿಸಲೇಬೇಕು. ಅದಕ್ಕೆ ಬೇಕಾದಂಥ ನಿವೃತ್ತ ಜಡ್ಜ್ ನೇತೃತ್ವದಲ್ಲಿ ಒಂದು ಅಥಾರಿಟಿ ಇರುತ್ತದೆ. ಹಾಗೆಯೇ visitor ಆಗಿ ರಾಜ್ಯಪಾಲರು ಮತ್ತು Higher Education Minister ಇರುತ್ತಾರೆ.

ಶ್ರೀ ಬಿ. ಸುರೇಶ್‌ಗೌಡ :- ಅವರ patternನಲ್ಲಿ ಎಲ್ಲರನ್ನು ಹಾಕಿರುತ್ತಾರೆ. ಬೇಕಾದರೆ, ಯಾವುದಾದರೊಂದು ಕಾಲೇಜಿನ pattern ಅನ್ನು ತಾವು ತೆಗೆದು ನೋಡಿ. ಮಾನ್ಯ ಅಬ್ದುಲ್ ಕಲಾಂನವರಿಂದ ಹಿಡಿದು ಬೇರೆ ಬೇರೆಯವರ ಹೆಸರುಗಳನ್ನು ಹಾಕಿಕೊಂಡಿರುತ್ತಾರೆ. ಅಬ್ದುಲ್ ಕಲಾಂನವರ ಹೆಸರು ಹಾಕಿದ್ದಾರೆಂದು ಹೇಳಿ ಅಬ್ದುಲ್ ಕಲಾಂನವರು ಅಲ್ಲಿ ಬಂದು ಕೆಲಸ ಮಾಡುತ್ತಾರೆಯೇ?

ಶ್ರೀ ಕೆ. ರಘುಪತಿ ಭಟ್ :- ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಾನು ಕೂಡ ಸ್ವಲ್ಪ ಮಾತನಾಡುತ್ತೇನೆ. ಈ ಬಿಲ್‌ನಲ್ಲಿ ಸೇರಿಸಬೇಕಾಗಿರುವ ಬಹಳ ಪ್ರಾಮುಖ್ಯವಾದುದು ಏನೆಂದರೆ, ಇದರಲ್ಲಿ ನೌಕರರಿಗೆ ಸೇವಾ ಷರತ್ತುಗಳನ್ನು ಮಾಡಿದ್ದೀರಿ. ಮಣಿಪಾಲ್ ವಿಶ್ವವಿದ್ಯಾಲಯ ನನ್ನ ಕ್ಷೇತ್ರಕ್ಕೆ ಬರುತ್ತದೆ. ಅವರು ಇವತ್ತಿನದಿವಸ lecturers ಗೆ UGC scale ಸಂಬಳ ಕೊಡುತ್ತಿದ್ದಾರೆ. ಆದರೆ, ಅಲ್ಲಿ ಕೆಲಸ ಮಾಡುವಂಥ non-teaching staff ಗೆ even state scale ಸಹ ಕೊಡುತ್ತಿಲ್ಲ. ಮತ್ತೆ ನಮ್ಮಲ್ಲಿ ಲೋಕಲ್ ಕಾಲೇಜಿನಲ್ಲಿ ಕೊಡುತ್ತಿರುವಷ್ಟು ಸಂಬಳ ಸಹ ಅವರಿಗೆ ಕೊಡುತ್ತಿಲ್ಲ. ಆದ್ದರಿಂದ ನನ್ನ ವಿನಂತಿ ಏನೆಂದರೆ, ವಿಶ್ವವಿದ್ಯಾಲಯವನ್ನು ಖಾಸಗಿ ಮಾಡಿದಾಗ teaching staff ಗಳಿಗೆ ಕೊಟ್ಟಂತೆ non-teaching staff ಗೂ ಕೂಡ ಕಡ್ಡಾಯವಾಗಿ UGC scale ಕೊಡುವಂತೆ ಮಾಡಬೇಕು. ಮಣಿಪಾಲ್ ಖಾಸಗಿ ವಿಶ್ವವಿದ್ಯಾಲಯದ ವಿಧೇಯಕವನ್ನು ನಾನು ಒಪ್ಪುತ್ತೇನೆ. ಇದು ಒಳ್ಳೆಯ ಒಂದು ವಿಧೇಯಕವಾಗಿದ್ದು, ಇದನ್ನು ಬೇಡವೆಂದು ನಾನು ಹೇಳುವುದಿಲ್ಲ. ಅವರಿಗೆ ಸ್ವಾಯತ್ತತೆ ಕೊಟ್ಟು ಅಲ್ಲಿನ ನೌಕರರ ಬಗ್ಗೆ ಸರ್ಕಾರ ಏನೂ ಕೇಳುವಂಥ ಪರಿಸ್ಥಿತಿ ಇಲ್ಲ. ಇವತ್ತಿನ ದಿವಸ ಮಣಿಪಾಲ್‌ನಲ್ಲಿರುವ ಸಿಬ್ಬಂದಿಗಳು ಸ್ಟ್ರೈಕ್ ಮಾಡುವ ಹಂತಕ್ಕೆ ಬಂದಿದ್ದಾರೆ. ಬೇರೆ ಬೇರೆ ಆಸ್ಪತ್ರೆಗಳಲ್ಲಿ ಕೊಡುವಂಥ ಸಂಬಳಕ್ಕಿಂತ ಕಡಿಮೆ ಸಂಬಳ ಅಲ್ಲಿ ಸಿಗುತ್ತಿದೆ. ಆದ್ದರಿಂದ, UGC scale ಅನ್ನು teaching and non-teaching staffಗೂ ಸಹ ಕೊಡಬೇಕೆಂಬುದನ್ನು ತಾವು ದಯವಿಟ್ಟು ಸೇರಿಸಬೇಕು. ಇದರಿಂದ ಸಹಸ್ರಾರು ನೌಕರರಿಗೆ ಒಂದು ಭದ್ರತೆಯನ್ನು ಕೊಟ್ಟಂತೆ ಆಗುತ್ತದೆ. UGC scale ಕೊಡುವಂಥ ವಿಶ್ವವಿದ್ಯಾಲಯಗಳ ರೀತಿಯಲ್ಲಿಯೇ ಅವರು ಸಹ fees ತೆಗೆದುಕೊಳ್ಳುತ್ತಾರೆ. ಆದರೆ, ಅಲ್ಲಿನ ನೌಕರರಿಗೆ ಸಂಬಳ ಮಾತ್ರ ಮೂರುಕಾಸು ಮಾತ್ರ ಸಿಗುತ್ತಿದೆ. ದಯವಿಟ್ಟು ಇದೇ ಬಿಲ್‌ನಲ್ಲಿ ಅದನ್ನು ಸೇರಿಸಬೇಕು. ಅಲ್ಲಿ 8000 ಜನ ನೌಕರರು ಇದ್ದಾರೆ. ಇದನ್ನು ತಾವು ಮಾಡಿದರೆ ಅವರಿಗೊಂದು ಸಹಾಯ

ಮಾಡಿದಂತೆ ಆಗುತ್ತದೆ. UGC scale ಕೊಡಬೇಕೆಂದು ದಯವಿಟ್ಟು ಸೇರಿಸಬೇಕು.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, MCI, UGC ಮತ್ತು AICTE ಯ ಎಲ್ಲಾ ಷರತ್ತುಗಳು ಈ ವಿಶ್ವವಿದ್ಯಾಲಯಕ್ಕೆ apply ಆಗುತ್ತವೆ. ಈ ಷರತ್ತುಗಳನ್ನು ಪಾಲನೆ ಮಾಡದೆ ಇದ್ದರೆ ಅವು recognition ಅನ್ನು ಕಳೆದುಕೊಳ್ಳುತ್ತವೆ ಆದ್ದರಿಂದ, ಅವರ ಷರತ್ತುಗಳನ್ನು ಪಾಲನೆ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ.

ಶ್ರೀ ಕೆ. ರಘುಪತಿ ಭಟ್ :– ಇದರ ಬಗ್ಗೆ ನಾನು ಹೇಳುತ್ತೇನೆ. ಏಕೆಂದರೆ, ಅದರಲ್ಲಿ ನಾನು ಬಹಳಷ್ಟು ಡೀಲ್ ಮಾಡಿದ್ದೇನೆ.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, AICTE, UGC, MCI ನ ಎಲ್ಲಾ ಷರತ್ತುಗಳನ್ನು ಅವರು ಪಾಲಿಸಲೇಬೇಕೆಂದು ಅದರೊಳಗೆ ಇದೆ. ಅವರು ಪಾಲಿಸದೆ ಇದ್ದರೆ ಅವು recognition ಕಳೆದುಕೊಳ್ಳುತ್ತವೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಮಣಿಪಾಲ್ ಯೂನಿವರ್ಸಿಟಿಯವರು ನಾನ್ ಟೀಚಿಂಗ್‌ದವರಿಗೆ ಯು.ಜಿ.ಸಿ. ಸ್ಕೇಲ್ ಕೊಡುತ್ತಿಲ್ಲ.

ಅಧ್ಯಕ್ಷರು : ಹೇಗಾಗುತ್ತದೆ.?

ಶ್ರೀ ರಘುಪತಿ ಭಟ್ : ಮಾಹೆ ಡೀಮ್ಡ್ ಯೂನಿವರ್ಸಿಟಿ. ಆದರೆ ಅವರಿಗೆ ಯಾವುದೇ ಹತೋಟಿ ಇಲ್ಲ. ದಯವಿಟ್ಟು ಈ ಬಿಲ್‌ನಲ್ಲಿ ಸೇರಿಸಿದರೆ ಮಾತ್ರ ಅವರಿಗೆ ರಕ್ಷಣೆ ಕೊಡಬಹುದು. ದಯವಿಟ್ಟು ಇದು ಬಹಳ ಪ್ರಾಮುಖ್ಯವಾದುದು, ತಾವು discussion ಮಾಡಿ, ನೀವು ಏನು ಹೇಳುತ್ತಿದ್ದೀರಿ. ದಯವಿಟ್ಟು ತಮಗೆ ತಪ್ಪು ಮಾಹಿತಿ ಇದೆ. ಅವರು ಯು.ಜಿ.ಸಿ. ಸ್ಕೇಲ್‌ನ್ನು ಕೊಡುತ್ತಿಲ್ಲ. Lecturers ಗೆ ಯು.ಜಿ.ಸಿ. ಸ್ಕೇಲ್ ಕೊಡುತ್ತಾರೆ. ಏಕೆಂದರೆ, ಅವರಿಗೆ ಬೇರೆ ಸಿಗುವುದಿಲ್ಲ. ಇಲ್ಲದಿದ್ದರೆ ಅವರು ಒಳ್ಳೊಳ್ಳೆಯ ಕಾಲೇಜುಗಳಿಗೆ ಹೋಗುತ್ತಾರೆ. ಅಲ್ಲಿರತಕ್ಕಂಥ ಕ್ಲರ್ಕ್‌ಗಳು, ಲ್ಯಾಬ್ ಟೆಕ್ನೀಷಿಯನ್‌ಗಳು, ನರ್ಸ್‌ಗಳು, ಎಲೆಕ್ಟ್ರೀಷಿಯನ್‌ಗಳು ಕಷ್ಟಪಟ್ಟು

ಕೆಲಸ ಮಾಡುತ್ತಿದ್ದಾರೆ, ಅವರಿಗೆ ಮೂರು ಕಾಸಿನ ಸಂಬಳ ಇದೆ. ನನ್ನದು ಒಂದೇ ವಿನಂತಿ, ನಾನ್–ಟೀಚಿಂಗ್ ಸ್ಟಾಫ್‌ನವರಿಗೆ ಯು.ಜಿ.ಸಿ. ಸ್ಕೇಲ್‌ನ್ನು ಕೇಂದ್ರ ಸರ್ಕಾರ ಮಾಡಿರುವಂಥದ್ದು. ಆ ಸ್ಕೇಲ್‌ನ್ನು ಕೊಡಬೇಕು. ಅವರು ನಮ್ಮ ರಾಜ್ಯದ ಲೇಬರ್ ಆಕ್ಟ್ ಅಡಿಯೊಳಗೆ ಬರುವುದಿಲ್ಲ. ನಾವು ಯಾರ ಹತ್ತಿರ ಕೇಳುವ ಹಾಗೆ ಇಲ್ಲ. ಅವರನ್ನು ಕೇಳಿದರೆ ಸೆಂಟ್ರಲ್ ಲೇಬರ್ ಆಕ್ಟ್ ಎಂದು ಹೇಳುತ್ತಾರೆ. 8–10 ಸಾವಿರ ಜನ ಕೆಲಸ ಮಾಡುತ್ತಾರೆ. ಅವರಿಗೆ ನ್ಯಾಯವಿಲ್ಲ. ನಾನ್–ಟೀಚಿಂಗ್ ಸ್ಟಾಫ್‌ಗೆ ಯು.ಜಿ.ಸಿ. ಸ್ಕೇಲ್ ಕೊಡುತ್ತೇವೆಂದು ನೀವು ಮಾಡಿದರೆ ಮಾತ್ರ ಅವರಿಗೆ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ನೀವು ಇಷ್ಟು ಒಳ್ಳೆಯ ಬಿಲ್‌ನ್ನು ಅವರಿಗೆ ಮಾಡಿಕೊಟ್ಟು ಆ ನೌಕರರಿಗೆ ಪ್ರಯೋಜನವಿಲ್ಲದಂತಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕು. ನೀವು ಯು.ಜಿ.ಸಿ. ಸ್ಕೇಲ್ ಕೊಡುವುದಕ್ಕಾಗುವುದಿಲ್ಲವೆಂದರೆ ನಾನ್ ಟೀಚಿಂಗ್‌ಗೆ ಸ್ಟೇಟ್ ಸ್ಕೇಲ್‌ನ್ನಾದರೂ ಕೊಡುವುದರ ಬಗ್ಗೆ ಸೇರಿಸಬೇಕು.

ಶ್ರೀ ಬಿ. ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ನಾವು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದಂತಹವರು ನಾವು ನಿಮ್ಮಲ್ಲಿ ಮನವಿ ಮಾಡುತ್ತೇವೆ. ಸೆನೆಟ್, ಸಿಂಡಿಕೇಟ್‌ಗಳು ವಿಶ್ವವಿದ್ಯಾಲಯಗಳು ಹೇಗೆ ನಡೆಯುತ್ತವೆ ಎನ್ನುವುದು ನಮಗೆ ಗೊತ್ತಿದೆ. ಮಾನ್ಯ ರವಿಯವರು ಹೊಸದಾಗಿ ಸಚಿವರಾಗಿ ಬಂದಿದ್ದಾರೆ. ಇನ್ನು 10 ಕಾಲೇಜುಗಳಿಗೆ ಮಾನ್ಯತೆ ಕೊಡಬೇಕೆಂದು ಬಂದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ಏಕೆ ಬೇಕು, ವಿಟಿಯು ಏಕೆ ಬೇಕು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಏಕೆ ಬೇಕು? ಎಲ್ಲವನ್ನು ಪ್ರೈವೇಟೈಜೇಷನ್ ಮಾಡಲಿ. ಸರ್ಕಾರದ ಬೊಕ್ಕಸಕ್ಕೆ ಹಣ ಕಡಿಮೆ ಆಗುತ್ತದೆ. Vice Chancellor ಅನ್ನು ಅಪಾಯಿಂಟ್‌ಮೆಂಟ್ ಮಾಡುವುದು, ರಿಜಿಸ್ಟ್ರಾರ್‌ನ್ನು ಅಪಾಯಿಂಟ್‌ಮೆಂಟ್ ಮಾಡುವುದು. ಸ್ಟಾಫ್ ಅಪಾಯಿಂಟ್ ಮೆಂಟ್ ಮಾಡುವುದು. ಅವರಿಗೆ ಒಂದು ವರ್ಷಕ್ಕೆ ನಾವು ಬಜೆಟ್‌ನಲ್ಲಿ ಸುಮಾರು ಹಣವನ್ನು ಹೈಯರ್ ಎಜುಕೇಷನ್ ಕೊಡುತ್ತೇವೆ. ಅವರೇ ಎಲ್ಲವನ್ನು ಮಾಡಿಕೊಂಡು ಬಿಟ್ಟರೆ ಉತ್ತಮ ಅಲ್ಲವೆ ಸರ್? ಇದರಿಂದ

ಸಾಮಾಜಿಕ ಬದ್ಧತೆ ಹಾಳಾಗುತ್ತದೆ. ಮಣಿಪಾಲ್ ಒಂದು ಕಾಲೇಜು ಆದರೆ ಓಕೆ. ಇದೊಂದು ಪ್ರತಿಷ್ಠಿತವಾದ ಸಂಸ್ಥೆ. ಆದರೆ ಸಚಿವರು ಇನ್ನು ಅಂತಹ 10 ಕಾಲೇಜುಗಳನ್ನು ತಂದಿದ್ದಾರೆ. ಈ ಕಾಲೇಜಿನವರು ಒಂದು advantage ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ. ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಒಬಿಸಿಗಳಿಗೆ ಅಡ್ಮಿಷನ್‌ಗಳನ್ನು ಕೊಡದೆ ಇದರ ಅಡಿಯಲ್ಲಿ 'ಸೇರಿಸಿಕೊಂಡು ಫೀಸ್‌ಸ್ಟ್ರಕ್ಚರ್‌ನ್ನು. .

ಅಧ್ಯಕ್ಷರು : ಆಗಲೇ ಅದನ್ನು ಹೇಳಿದ್ದೀರಿ, ಮತ್ತೆ ಈಗ ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಬಿ. ಸುರೇಶ್‌ಗೌಡ : ಇಲ್ಲಿ ಎಂ.ಎಲ್.ಎ ಮತ್ತು ಎಂ.ಎಲ್.ಸಿ. ಗಳು ಈ ಆಕ್ಟ್‌ನಲ್ಲಿ ಬರಬೇಕು. ಜೊತೆಗೆ ಜಾಯಿಂಟ್ ಹೌಸ್ ಕಮಿಟಿ ಮಾಡಿ, ಮಣಿಪಾಲ ಯೂನಿವರ್ಸಿಟಿ ಒಂದನ್ನು ಬಿಟ್ಟು ಮುಂಚೆ ಎರಡು ಕೊಟ್ಟಿದ್ದರಲ್ಲಾ ಅಜೀಂ ಪ್ರೇಮ್‌ಜಿ ಮತ್ತು ಅಲಯನ್ಸ್ ಬ್ಯುಸಿನೆಸ್ ಅಕಾಡೆಮಿ ಈ ಎರಡು ಯೂನಿವರ್ಸಿಟಿಗಳಿಗೆ ಕೊಟ್ಟಿದ್ದು ಆ ಎರಡು ಯೂನಿವರ್ಸಿಟಿಗಳು ಸರಿಯಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ನೋಡಿ, ಮೊದಲು ತನಿಖೆ ಆಗಬೇಕು. ಆಮೇಲೆ ಇದನ್ನು ಹೌಸ್‌ನಲ್ಲಿ place ಮಾಡಬೇಕು. ಅಲ್ಲಿಯವರೆಗೆ ಇದನ್ನು ಮುಂದೂಡಬೇಕು, ಇದಕ್ಕೆ ತಿದ್ದುಪಡಿ ಮಾಡಿ ತರಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ. : ಆಕ್ಟ್ ಒಳಗಡೆ ಏನಿದೆ, ಅಷ್ಟನ್ನು ಮಾಡುತ್ತೇವೆ.

ಶ್ರೀ ಕೆ. ರಘುಪತಿ ಭಟ್ : ಸ್ಟೇಟ್ ಸ್ಕೇಲ್‌ನ್ನಾದರೂ ನಾನ್ ಟೀಚಿಂಗ್ ಸ್ಟಾಫ್‌ಗೆ ಕೊಡುವಂಥದ್ದನ್ನು ಸೇರಿಸಿ. ಅವರ ಕೈಗೆ ಸ್ವಾಯತ್ತತೆಯನ್ನು ಕೊಟ್ಟ ನಂತರ ಆ ನೌಕರರನ್ನು ಕೇಳುವವರು ಇಲ್ಲದಂತಾಗುತ್ತದೆ. ನಿಮ್ಮ ಆಕ್ಟ್‌ನಲ್ಲಿ ಅದು ಇಲ್ಲ. ದಯವಿಟ್ಟು ಸ್ಟೇಟ್ ಸ್ಕೇಲ್‌ನ್ನಾದರೂ ಸೇರಿಸುವಂಥದ್ದನ್ನು ಮಾಡಿ, ಇವರಿಗೆ ಇದು ಸಿಗುತ್ತಿಲ್ಲ. ನನ್ನದು ಬೇರೆ ಏನೂ ಇಲ್ಲ. ನೀವು ಬಿಲ್ ಮಾಡುವುದಕ್ಕೆ ನನ್ನದು ಎಲ್ಲಾ ಒಪ್ಪಿಗೆ ಇದೆ. ಆದರೆ ಅದನ್ನು ಒಂದು ಸೇರಿಸಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರಘುಪತಿ ಭಟ್‌ರವರು ಮತ್ತು ಸುರೇಶ್‌ಗೌಡವರು ಹೇಳಿದರು. ನಾನು ಮಂತ್ರಿಗಿಂತ ಮೊದಲು

ಶಾಸನಸಭಾ ಸದಸ್ಯನಾಗಿದ್ದವನು. ಇವರು ವಾಸ್ತವಿಕ ಹಿನ್ನೆಲೆಯಲ್ಲಿ ಅವರು ಹೇಳಿರುವುದನ್ನು ಪರಿಶೀಲನೆ ಮಾಡಿ ಆ ನೌಕರರ ಹಿತದೃಷ್ಟಿ ಮತ್ತು ಮ್ಯಾನೇಜ್‌ಮೆಂಟ್ ಮೇಲೆ ಶಾಸನಸಭೆಗೆ ಇರಬಹುದಾದಂಥ ಪರಮಾಧಿಕಾರ ಯಾವತ್ತೂ ಇರುತ್ತದೆ. ಅದನ್ನು ಆಧರಿಸಿ ಖಂಡಿತವಾಗಿ ಕೂಡ ಈ ಕಾನೂನಿನ ಒಳಗಡೆ ಏನೇನು ಸಹಾಯ ಮಾಡುವುದಕ್ಕೆ ಆಗುತ್ತದೆ ಮತ್ತು ಪ್ರೊಟೆಕ್ಟ್ ಮಾಡುವುದಕ್ಕೆ ಆಗುತ್ತದೆ. ಎಲ್ಲವನ್ನು ಕೊಡಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಈ ವಿಧೇಯಕವನ್ನು ತಿದ್ದುಪಡಿ ಯೊಂದಿಗೆ ಅಂಗೀಕರಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2012ನೇ ಸಾಲಿನ ಮಣಿಪಾಲ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 :–

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ–2ಕ್ಕೆ ತಿದ್ದುಪಡಿಯನ್ನು ತಂದಿರುವರು. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ–2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"(ಎ) (ಐ) ಮತ್ತು (ಜೆ) ಖಂಡಗಳನ್ನು ಬಿಟ್ಟು ಬಿಡತ್ತಕ್ಕದ್ದು:

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (ಕೆ), (ಎಲ್), (ಎಂ), (ಎನ್), (ಒ), (ಪಿ), (ಕ್ಯೂ), (ಆರ್), (ಎಸ್), (ಟಿ), (ಯು), (ವಿ), (ಡಬ್ಲ್ಯೂ), (ಎಕ್ಸ್), (ವೈ), ಮತ್ತು (ಜಡ್) ಇವುಗಳನ್ನು (ಐ), (ಜೆ), (ಕೆ)), (ಎಲ್), (ಎಂ), (ಎನ್), (ಒ), (ಪಿ), (ಕ್ಯೂ), (ಆರ್), (ಎಸ್), (ಟಿ), (ಯು), (ವಿ), (ಡಬ್ಲ್ಯೂ), ಮತ್ತು (ಎಕ್ಸ್) ಎಂದು ಅನುಕ್ರಮವಾಗಿ ಮರು ಸಂಖ್ಯೆ ನೀಡತಕ್ಕದ್ದು.

(ಸಿ) ಹಾಗೆ ಪ್ರತಿಯೋಜಿಸಿದ ತರುವಾಯ, (ಐ) ಉಪಖಂಡದಲ್ಲಿ, "28" ಎಂಬ ಅಂಕಿಗೆ "27" ಎಂಬ ಅಂಕಿಯನ್ನು ಪ್ರತಿಯೋಜಿಸತಕ್ಕದ್ದು."

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ.

ಖಂಡ-2 ರಲ್ಲಿ:

"(ಎ) (ಐ) ಮತ್ತು (ಜೆ) ಖಂಡಗಳನ್ನು ಬಿಟ್ಟು ಬಿಡತಕ್ಕದ್ದು:

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (ಕೆ), (ಎಲ್), (ಎಂ), (ಎನ್), (ಒ), (ಪಿ), (ಕ್ಯೂ), (ಆರ್), (ಎಸ್), (ಟಿ), (ಯು), (ವಿ), (ಡಬ್ಲ್ಯೂ), (ಎಕ್ಸ್), (ವೈ), ಮತ್ತು (ಜಡ್) ಇವುಗಳನ್ನು (ಐ), (ಜೆ), (ಕೆ)), (ಎಲ್), (ಎಂ), (ಎನ್), (ಒ), (ಪಿ), (ಕ್ಯೂ), (ಆರ್), (ಎಸ್), (ಟಿ), (ಯು), (ವಿ), (ಡಬ್ಲ್ಯೂ), ಮತ್ತು (ಎಕ್ಸ್) ಎಂದು ಅನುಕ್ರಮವಾಗಿ ಮರು ಸಂಖ್ಯೆ ನೀಡತಕ್ಕದ್ದು.

(ಸಿ) ಹಾಗೆ ಪ್ರತಿಯೋಜಿಸಿದ ತರುವಾಯ, (ಐ) ಉಪಖಂಡದಲ್ಲಿ, "28" ಎಂಬ ಅಂಕಿಗೆ "27" ಎಂಬ ಅಂಕಿಯನ್ನು ಪ್ರತಿಯೋಜಿಸತಕ್ಕದ್ದು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ತಿದ್ದುಪಡಿಯಾದ 2ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ"ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ–2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 3 :–

ಅಧ್ಯಕ್ಷರು : 3ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

"3ನೇ ಖಂಡವು ವಿಧೇಯಕದ ಅಂಗವಾಯಿತು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(3ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 4 :-

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ-4ಕ್ಕೆ ತಿದ್ದುಪಡಿಯನ್ನು ತಂದಿರುವರು. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ-4ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"4ನೇ ಖಂಡದ (1)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(1) ರಾಜ್ಯ ಸರ್ಕಾರವು ಪರಿಶೋಧನಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ;

(i) ನ್ಯಾಸವು ಸಾಕಷ್ಟು ಮೂಲ ಸೌಕರ್ಯದೊಂದಿಗೆ ವಿಶ್ವವಿದ್ಯಾಲಯವೊಂದನ್ನು ನಡೆಸಲು ಸಮರ್ಥವಾಗಿದೆ ಎಂದು ಅದು ಮನಗಂಡರೆ;

(ii) ಪ್ರದೇಶಕ್ಕನುಸಾರವಾಗಿ ಕೆಳಗೆ ನಿರ್ದಿಷ್ಟ ಪಡಿಸಿದ ವ್ಯಾಪ್ತಿಗೆ ಭೂಮಿಯ ಒಡೆತನವನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಭೂಮಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಿತಿಯೊಳಗಿದ್ದರೆ ಇಪ್ಪತ್ತೈದು ಎಕರೆಗಳು;

(ಬಿ) ಭೂಮಿಯು ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಿಂದ ಹೊರಗೆ ಇದ್ದು ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪ್ರದೇಶದ ಒಳಗೆ ಇದ್ದರೆ ನಲವತ್ತು ಎಕರೆಗಳು;

(ಸಿ) ಭೂಮಿಯು (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳನ್ನು ಹೊರತುಪಡಿಸಿದ್ದರೆ ಅರವತ್ತು ಎಕರೆಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

ಮೇಲೆ ನಿರ್ದಿಷ್ಟಪಡಿಸಿದ ಭೂಮಿಯು ಏಕ ಘಟಕ (ಸಿಂಗಲ್ ಬ್ಲಾಕ್) ದಲ್ಲಿರತಕ್ಕದ್ದು ಮತ್ತು ಇದು ಸಂಬಂಧಪಟ್ಟ ನ್ಯಾಸ / ಪ್ರತಿಷ್ಠಾನ/ ಸಂಸ್ಥೆ/ ವಿಶ್ವವಿದ್ಯಾಲಯದ ಹೆಸರಿನಲ್ಲಿರತಕ್ಕದ್ದು. 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ನ್ಯಾಸವು ಒದಗಿಸಿದ ವಿವರಗಳ ಆಧಾರದ ಮೇಲೆ ಸರ್ಕಾರವು 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸಬೇಕೆಂದು ನ್ಯಾಸಕ್ಕೆ ನಿರ್ದೇಶನ ನೀಡಬಹುದು."

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ.

"4ನೇ ಖಂಡದ (1)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(1) ರಾಜ್ಯ ಸರ್ಕಾರವು ಪರಿಶೋಧನಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ;

(i) ನ್ಯಾಸವು ಸಾಕಷ್ಟು ಮೂಲ ಸೌಕರ್ಯದೊಂದಿಗೆ ವಿಶ್ವವಿದ್ಯಾಲಯವೊಂದನ್ನು ನಡೆಸಲು ಸಮರ್ಥವಾಗಿದೆ ಎಂದು ಅದು ಮನಗಂಡರೆ;

(ii) ಪ್ರದೇಶಕ್ಕನುಸಾರವಾಗಿ ಕೆಳಗೆ ನಿರ್ದಿಷ್ಟ ಪಡಿಸಿದ ವ್ಯಾಪ್ತಿಗೆ ಭೂಮಿಯ ಒಡೆತನವನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಭೂಮಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಿತಿಯೊಳಗಿದ್ದರೆ ಇಪ್ಪತ್ತೈದು ಎಕರೆಗಳು;

(ಬಿ) ಭೂಮಿಯು ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಿಂದ ಹೊರಗೆ ಇದ್ದು ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪ್ರದೇಶದ ಒಳಗೆ ಇದ್ದರೆ ನಲವತ್ತು ಎಕರೆಗಳು;

(ಸಿ) ಭೂಮಿಯು (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಸ್ಥಳಗಳನ್ನು ಹೊರತುಪಡಿಸಿದ್ದರೆ ಅರವತ್ತು ಎಕರೆಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

ಮೇಲೆ ನಿರ್ದಿಷ್ಟಪಡಿಸಿದ ಭೂಮಿಯು ಏಕ ಘಟಕ (ಸಿಂಗಲ್ ಬ್ಲಾಕ್) ದಲ್ಲಿರತಕ್ಕದ್ದು ಮತ್ತು ಇದು ಸಂಬಂಧಪಟ್ಟ ನ್ಯಾಸ / ಪ್ರತಿಷ್ಠಾನ/ ಸಂಸ್ಥೆ/ ವಿಶ್ವವಿದ್ಯಾಲಯದ ಹೆಸರಿನಲ್ಲಿರತಕ್ಕದ್ದು. 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ನ್ಯಾಸವು ಒದಗಿಸಿದ ವಿವರಗಳ ಆಧಾರದ ಮೇಲೆ ಸರ್ಕಾರವು 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸಬೇಕೆಂದು ನ್ಯಾಸಕ್ಕೆ ನಿರ್ದೇಶನ ನೀಡಬಹುದು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು

ಖಂಡ–4 : ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ತಿದ್ದುಪಡಿಯಾದ 4ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ–4 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 5 :–

ಅಧ್ಯಕ್ಷರು : 5ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

("5ನೇ ಖಂಡವು ವಿಧೇಯಕದ ಅಂಗವಾಯಿತು." ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(5ನೇ ಖಂಡವನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 6 :-

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ-6ಕ್ಕೆ ತಿದ್ದುಪಡಿಯನ್ನು ತಂದಿರುವರು. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ಖಂಡ6-ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"6ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಘಟಕ ಕಾಲೇಜು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ:- ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯವು ಸ್ಥಾಪನೆಯಾದ ತರುವಾಯ ಐದು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು".

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ.

"6ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಘಟಕ ಕಾಲೇಜು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ:- ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯವು ಸ್ಥಾಪನೆಯಾದ ತರುವಾಯ ಐದು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ

ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು".

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ–6 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ತಿದ್ದುಪಡಿಯಾದ 6ನೇ ಖಂಡವು ವಿಧೇಯಕದ ಅಂಗ ವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ–6 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7:-

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ-7ಕ್ಕೆ ತಿದ್ದುಪಡಿಯನ್ನು ತಂದಿರುವರು. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ-7ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"7ನೇ ಖಂಡದಲ್ಲಿ :-

(ಎ) (iii)ನೇ ಬಾಬನ್ನು ಬಿಟ್ಟು ಬಿಡತಕ್ಕದ್ದು.

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (iv), (v), (vi), (vii), (viii), (ix) ಮತ್ತು (x) ಬಾಬುಗಳಿಗೆ (iii), (iv), (v), (vi), (vii), (viii) ಮತ್ತು (ix) ಎಂದು ಮರು ಸಂಖ್ಯೆ ನೀಡತಕ್ಕದ್ದು."

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ,

"7ನೇ ಖಂಡದಲ್ಲಿ :-

"(ಎ) (iii)ನೇ ಬಾಬನ್ನು ಬಿಟ್ಟುಬಿಡತಕ್ಕದ್ದು.

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (iv), (v), (vi), (vii), (viii), (ix) ಮತ್ತು (x) ಬಾಬುಗಳಿಗೆ (iii), (iv), (v), (vi), (vii), (viii) ಮತ್ತು (ix) ಎಂದು ಮರು ಸಂಖ್ಯೆ ನೀಡತಕ್ಕದ್ದು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ–7 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ತಿದ್ದುಪಡಿಯಾದ 7ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ–7 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 8:–

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಖಂಡ–8ಕ್ಕೆ ತಿದ್ದುಪಡಿಯನ್ನು ತಂದಿರುವರು. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ–8ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"8ನೇ ಖಂಡದಲ್ಲಿ :–

(ಎ) (xiii)ನೇ ಬಾಬನ್ನು ಬಿಟ್ಟು ಬಿಡತಕ್ಕದ್ದು.

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (xiv), (xv), (xvi), (xvii), (xviii), (xix) ಮತ್ತು (xx), (xxi) ಮತ್ತು (xxii), ಬಾಬುಗಳಿಗೆ (xiii), (xiv), (xv), (xvi), (xvii), (xviii), (xix), (xx) ಮತ್ತು (xxi) ಎಂದು ಮರು ಸಂಖ್ಯೆ ನೀಡತಕ್ಕದ್ದು."

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ,

"8ನೇ ಖಂಡದಲ್ಲಿ:-

(ಎ) (xiii)ನೇ ಬಾಬನ್ನು ಬಿಟ್ಟು ಬಿಡತಕ್ಕದ್ದು.

(ಬಿ) ಹಾಗೆ ಬಿಟ್ಟು ಬಿಟ್ಟ ತರುವಾಯ, (xiv), (xv), (xvi), (xvii), (xviii), (xix) ಮತ್ತು (xx), (xxi) ಮತ್ತು (xxii), ಬಾಬುಗಳಿಗೆ (xiii), (xiv), (xv), (xvi), (xvii), (xviii),(xix), (xx) ಮತ್ತು (xxi) ಎಂದು ಮರು ಸಂಖ್ಯೆ ನೀಡತಕ್ಕದ್ದು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

